# ಅವನು ನಾನಲ್ಲ!



81 ನೇ ಇಳಿವಯಸ್ಸಿನಲ್ಲಿ ಕೆನಡಾದ ಟೊರೆಂಟೋ ಆಸ್ಪತ್ರೆಯಲ್ಲಿ ಕಳೆದ ವಾರ ನಿಧನ ಹೊಂದಿದ ಖಾದರ್ ಖಾನ್, ಬಾಲಿವುಡ್‌ನಲ್ಲಿ ಕಾಮಿಡಿ ಯುಗದ ಹೊಸ ಅಧ್ಯಾಯವೊಂದನ್ನು ಹುಟ್ಟು ಹಾಕಿದಾತ. ಕಾಬೂಲ್‌ನಲ್ಲಿ ಹುಟ್ಟಿ ಬಾಲ್ಯದಲ್ಲಿ ಹೆತ್ತವರ ಜೊತೆಗೆ ಮುಂಬೈಗೆ ವಲಸೆ ಬಂದ ಖಾದರ್ ಖಾನ್, ಸ್ವಪ್ರಯತ್ನದಿಂದ ಮೇಲೆದ್ದು ಗೆದ್ದ ನಟ–ಸಂಭಾಷಣೆಕಾರ. ಬಾಲ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ. ಮುಂಬೈಯ ಕಾಮಾಟಿಪುರ ಪ್ರದೇಶದಲ್ಲಿ ಬಾಲ್ಯ ಕಳೆದ ಖಾದರ್ ಖಾನ್, ಚಿಕ್ಕಂದಿನಲ್ಲೇ ಇತರರನ್ನು ಅನುಕರಿಸುವ ಅಭ್ಯಾಸ ಹೊಂದಿದ್ದು ಮುಂದೆ ನಟನಾಗಿ ಉಪಯೋಗಕ್ಕೆ ಬಂತು. ಬಾಲಿವುಡ್‌ನಲ್ಲಿ ಸಲೀಂ– ಜಾವೇದ್ ಜೋಡಿ ಚಿತ್ರಕಥೆ, ಸಂಭಾಷಣೆಗೆ ಖ್ಯಾತಿ ಪಡೆದಿದ್ದ ದಿನಗಳಲ್ಲೇ ಖಾದರ್ ಖಾನ್ ಕೂಡಾ ಸಂಭಾಷಣೆಕಾರನಾಗಿ ಬೆಳೆದು ನಿಂತದ್ದು ನಿಜಕ್ಕೂ ಸೋಜಿಗದ ಸಂಗತಿ. ಗೋವಿಂದ ಅಭಿನಯದ 'ಕೂಲಿ ನಂಬರ್ ಒನ್' ಚಿತ್ರದ ಬಳಿಕ ಜನಪ್ರಿಯತೆಯ ತುತ್ತ ತುದಿಗೇರಿದರೂ ಖಾದರ್ ಖಾನ್ ಹಮ್ಮು ಬಿಮ್ಮು ಇಟ್ಟುಕೊಂಡಿದ್ದ ಮನುಷ್ಯನಲ್ಲ. ಎಷ್ಟೋ ಸಲ ಸಾರ್ವಜನಿಕ ಸ್ಥಳಗಳಲ್ಲಿ ಕಂಡು ಬಂದಾಗ ಜನರು ಅಭಿಮಾನದ ಮುತ್ತಿಗೆ ಹಾಕಿದರೂ, 'ಅರೆ, ನಾನು ಖಾದರ್ ಖಾನ್ ಅಲ್ಲ' ಎಂದು ಹೇಳಿ ಜಾರಿಕೊಂಡದ್ದೂ ಉಂಟಂತೆ! ಎಂಜಿನಿಯರಿಂಗ್ ಕಾಲೇಜಲ್ಲಿ ಸಿವಿಲ್ ಎಂಜಿನಿಯರಿಂಗ್ ಪಾಠ ಮಾಡುತ್ತಿದ್ದ ಮನುಷ್ಯ ಬಾಲಿವುಡ್‌ನಲ್ಲಿ ಪ್ರಖ್ಯಾತ ಸಂಭಾಷಣೆಕಾರನಾಗಿ ಬೆಳೆದು ನಿಂತದ್ದು ಬಾಲಿವುಡ್‌ನ ಒಂದು ಸ್ಮರಣಾರ್ಹ ಅಧ್ಯಾಯವೇ ಸರಿ.



# ಮದುವೆ ಯಾವಾಗ?

ಹೊಸ ವರ್ಷದ ಆಚರಣೆಯನ್ನು ಬಾಲಿವುಡ್‌ನ ಪ್ರತಿಯೊಬ್ಬ ತಾರೆಯರೂ ತಮಗಿಷ್ಟಬಂದ ಸ್ಥಳದಲ್ಲಿ ಇಷ್ಟ ಬಂದಂತೆ ಆಚರಿಸಿದ್ದಾರೆ. ಇವರಲ್ಲಿ ಹೆಚ್ಚು ಸುದ್ದಿ ಮಾಡಿದವರು ಪ್ರಿಯಾಂಕಾ ಚೋಪ್ರಾ ಮತ್ತು ಅಲಿಯಾ ಭಟ್. ಪ್ರಿಯಾಂಕಾ ಯೂರೋಪಿನ ರೆಸಾರ್ಟ್ ಒಂದರಲ್ಲಿ ತನ್ನ ಗಂಡ ನಿಕ್ ಜೊತೆಗೆ ಬಿಡಾರ ಹೂಡಿ, ಹೊಸ ವರ್ಷದ ಮಧ್ಯರಾತ್ರಿ ಗಂಡನಿಗೆ ಕಿಸ್ ಕೊಟ್ಟು ಹೊಸ ವರ್ಷವನ್ನು ಬರಮಾಡಿಕೊಂಡಿದ್ದಾಳೆ. ಅದರ ಫೋಟೋವನ್ನೂ ಹೆಮ್ಮೆಯಿಂದ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾಳೆ. ಅಲಿಯಾ ಭಟ್ ಹೊಸ ವರ್ಷದ ಆಚರಣೆಗೆ ನ್ಯೂಯಾರ್ಕ್‌ನಲ್ಲಿದ್ದಳು. ಅದೂ ರಣಬೀರ್ ಕಪೂರ್ ಜೊತೆಗೆ. ಅವರಿಬ್ಬರೇ ಇರಲಿಲ್ಲ. ರಿಷಿ ಕಪೂರ್, ನೀತು ಕಪೂರ್ ಮುಂತಾಗಿ ರಣಬೀರನ ಇಡೀ ಕುಟುಂಬವೇ ಇತ್ತು. ನ್ಯೂಯಾರ್ಕ್‌ನಲ್ಲಿ ರಿಷಿ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುತ್ತಿರುವುದರಿಂದ ಇಡೀ ಕುಟುಂಬವೇ ಅಲ್ಲಿ ಸೇರಿತ್ತು. ಹೊಸ ವರ್ಷದ ಈ ಫ್ಯಾಮಿಲಿ ಫೋಟೋ ನೋಡಿದರೆ, ಈಗಾಗಲೆ ಅಲಿಯಾ ಮತ್ತು ರಣಬೀರ್ ಮದುವೆಯಾದಂತೆಯೇ ಇದೆ.

ಅಲಿಯಾ ಮತ್ತು ರಣಬೀರ್ ಜೊತೆಗಿರುವುದು ಬಾಲಿವುಡ್‌ನಲ್ಲಿ ಗುಟ್ಟಿನ ವಿಷಯವೇನಲ್ಲ. ಆದರೆ ಇಬ್ಬರ ಮದುವೆ ಯಾವಾಗ ನಡೆಯುತ್ತದೆ ಎನ್ನುವುದೇ ಗುಟ್ಟಿನ ವಿಷಯ. ಬಹುತೇಕರ ಅಂದಾಜಿನಂತೆ ಬಾಲಿವುಡ್‌ನಲ್ಲಿ 2019ರಲ್ಲಿ ನಡೆಯಲಿರುವ ಬಿಗ್ ಫ್ಯಾಟ್ ಮದುವೆಗಳಲ್ಲಿ ಅಲಿಯಾ–ರಣಬೀರ್ ಅವರ ಮದುವೆಯೇ ಮೊದಲನೆಯದ್ದಾಗಲಿದೆ. ಕಳೆದ ವರ್ಷ ದೀಪಿಕಾ, ಪ್ರಿಯಾಂಕಾ, ಸೋನಂ ಕಪೂರ್ ಮುಂತಾದವರೆಲ್ಲ ಮದುವೆಯಾಗಿ ಛಾಯಾಗ್ರಾಹಕರಿಗೆ ಸಾಕಷ್ಟು ಕೆಲಸ ಕೊಟ್ಟಿದ್ದರು. ಈ ವರ್ಷ ಬಹುಶಃ ರಣಬೀರ್ ಮತ್ತು ಅಲಿಯಾ ಸುದ್ದಿಯ ಉತ್ತುಂಗದಲ್ಲಿ ಇರುವ ಸಾಧ್ಯತೆ ಇದೆ.



ಎರಡು ವರ್ಷಗಳ ಹಿಂದೆ ಅನೌನ್ಸ್ ಆದ ಬ್ರಹ್ಮಾಸ್ತ್ರ, ನಿರ್ದೇಶಕ ಅಯಾನ್ ಮುಖರ್ಜಿಯ ಲೆಕ್ಕಾಚಾರ ಪ್ರಕಾರ, ಈ ವರ್ಷದ ಆಗಸ್ಟ್‌ನಲ್ಲಿ ಬಿಡುಗಡೆ ಕಾಣಬೇಕಿತ್ತು. ಆದರೆ ಕೆಲವು ಕಾರಣಗಳಿಂದ ಚಿತ್ರದ ಬಿಡುಗಡೆ ಡಿಸೆಂಬರ್‌ಗೆ ಮುಂದಕ್ಕೆ ಹೋಗಿದೆ. ಈ ಚಿತ್ರದ ಸೆಟ್‌ನಲ್ಲೇ ಅಲಿಯಾ ಮತ್ತು ರಣಬೀರ್ ಮಧ್ಯೆ ಪ್ರೇಮ ಅರಳಿದ್ದಂತೆ. ಚಿತ್ರದಲ್ಲಿ ಅಮಿತಾಭ್ ಬಚ್ಚನ್ ಕೂಡಾ ಪ್ರಮುಖ ಪಾತ್ರದಲ್ಲಿದ್ದು, ಸಹಜವಾಗಿಯೇ ಈ ಚಿತ್ರ ವರ್ಷವಿಡೀ ಸುದ್ದಿಯಲ್ಲಿ ಇರುವಂತೆ ಕಾಣುತ್ತದೆ. ಚಿತ್ರ ಬಿಡುಗಡೆಗೆ ಮುನ್ನವೇ ಅಲಿಯಾ ಮತ್ತು ರಣಬೀರ್ ಮದುವೆ ಆಗಲಿಕ್ಕಿಲ್ಲ ಎನ್ನುವ ವಾದವೂ ಇದೆ.

■ ಹನಿ